


International Journal of Kannada Research
www.kannadajournal.com

**ISSN: 2454–5813**
IJSR 2015; 1(2): 50-54
© 2015 IJKS
www.kannadajournal.com
Received: 09-07-2015
Accepted: 12-08-2015

**ಎಸ್.ಬಿ.ಚನ್ನಗೌಡ್ರ**
ಎಂ.ಎ, ಕನ್ನಡ ಪ್ರಾಧ್ಯಾಪಕರು
ಹಾಗೂ ಪ್ರಾಂಶುಪಾಲರು,
ಬಿ.ಆರ್.ತಂಬಾಕದ ಕಲಾ ವಾಣಿಜ್ಯ
ಮತ್ತು ವಿಜ್ಞಾನ ಪ್ರಥಮ ದರ್ಜೆ
ಮಹಾವಿದ್ಯಾಲಯ ಹಿರೇಕೆರೂರು,
ಕರ್ನಾಟಕ, ಭಾರತ

**Correspondence**
**ಎಸ್.ಬಿ.ಚನ್ನಗೌಡ್ರ**
ಎಂ.ಎ, ಕನ್ನಡ ಪ್ರಾಧ್ಯಾಪಕರು
ಹಾಗೂ ಪ್ರಾಂಶುಪಾಲರು,
ಬಿ.ಆರ್.ತಂಬಾಕದ ಕಲಾ ವಾಣಿಜ್ಯ
ಮತ್ತು ವಿಜ್ಞಾನ ಪ್ರಥಮ ದರ್ಜೆ
ಮಹಾವಿದ್ಯಾಲಯ ಹಿರೇಕೆರೂರು,
ಕರ್ನಾಟಕ, ಭಾರತ

# ದಾನದ ಮಹತ್ವ

**ಎಸ್.ಬಿ.ಚನ್ನಗೌಡ್ರ**

**ಪೀಠಿಕೆ**

ವಿದ್ಯೆಗಳಲ್ಲಿ ನಾನಾ ರೀತಿಯ ವಿದ್ಯೆಗಳು ಬರುತ್ತವೆ. ವಿದ್ಯೆಗಳಲ್ಲಿ ಗಾನ ವಿದ್ಯೆ ಮೇಲಾದದ್ದು ಎಂದು ಸರ್ವಜ್ಞ ಹೇಳಿದ್ದಾನೆ. ಪರಿಗಣನೆಗೆ ತೆಗೆದುಕೊಂಡಾಗ ಕಲಿಯುವ ಪ್ರತಿಯೊಂದು ವಿಷಯವು ತನ್ನದೆ ಆಗಿರುವಂತಹ ಮಹತ್ವವನ್ನು ಪಡೆದುಕೊಂಡಿರುತ್ತದೆ. ಶ್ರೇಷ್ಠವಾಗಿರುವ ಗಾನ ವಿದ್ಯೆಯು ಎಲ್ಲರಿಗೂ ನಿಲುಕುವಂತಹದ್ದಲ್ಲ ದಕ್ಕುವಂತಹದ್ದಲ್ಲ. ಆತ್ಮ ಜ್ಞಾನಿಗಳ ಜೊತೆಗೆ ಗೆಳೆತನ ಮಾಡುವುದರಿಂದ ಆತ್ಮ ಬಲ ದೊರೆಯುತ್ತದೆ. ಆತ್ಮವನ್ನು ಪರಮಾತ್ಮನನ್ನಾಗಿ ಮಾಡಿಕೊಂಡಿರುವ ಆತ್ಮಜ್ಞಾನಿಗಳು ಸ್ವಾಭಿಮಾನದಿಂದ ಬದುಕುತ್ತಾರೆ. ಅಂಥವರ ಗೆಳೆತನ ಮಾಡುವುದರಿಂದ ಅವರಿಗೂ ಅಂತಹ ಸುದೈವ ದೊರಕುವುದು. ಅಲ್ಲದೆ ಸರ್ವರಲ್ಲಿ ದಾನ ಮಾಡುವವನೆ ಶ್ರೇಷ್ಠನಾಗಿರುತ್ತಾನೆ. ಯಾವುದೆ ದಾನವಾಗಲಿ ಅವನು ಪ್ರಜ್ಞಾಪೂರ್ವಕವಾಗಿ ಮನಃಪೂರ್ವಕವಾಗಿ ತನ್ನಲ್ಲಿರುವುದನ್ನು ದಾನ ಮಾಡುವುದರಿಂದ ಆತನಿಗೆ ಪುಣ್ಯ ಪ್ರಾಪ್ತಿಯಾಗುತ್ತದೆ.

ದಾನ ಪ್ರಧಾನ ಮತ್ತು ಪ್ರತಿಪಾಲನಗಳು ಪುಣ್ಯ ಅಥವಾ ಸ್ವರ್ಗಪ್ರಾಪ್ತಿಯ ಪರಮ ಸಾಧನಗಳು. ದಾನದ ಮೂಲಕ ಪುಣ್ಯ ಅಥವಾ ಸ್ವರ್ಗ ಪ್ರಾಪ್ತಿಯಾಗುತ್ತದೆ. ಎಂದು ಶಾಸನಗಳಲ್ಲಿ ಉಲ್ಲೇಖವಾಗಿದೆ. ದಾನ ಮಾಡಿದ್ದು ಮುಂದಿನ ಜನ್ಮದಲ್ಲಿ ತನಗೆ ದೊರೆಯುವುದು ಬಚ್ಚಿಟ್ಟದ್ದು ಇನ್ನೊಬ್ಬರಿಗೆ ಹೋಗುವುದು. ಕೊಟ್ಟ ದಾನವನ್ನು ಕೆಟ್ಟಿತೆನಬೇಡ ಅದು ನಿನಗೆ ಕಟ್ಟಿಟ್ಟ ಬುತ್ತಿ, ನಿನಗೆ ಮುಂದಿನ ಜನ್ಮದಲ್ಲಾದರೂ ಅಥವಾ ನಿನ್ನ ಮಕ್ಕಳಿಗಾದರೂ ನೀನು ಮಾಡಿದ ದಾನದ ಫಲ ನಿನಗೆ ದೊರೆಯದೇ ಇರಲಾರದು ಎಂಬ ಸರ್ವಜ್ಞನ ವಚನ ದಾನ ಮಾಡುವುದರ ಸಂದೇಶವನ್ನು ಸಾರಿ ಹೇಳುತ್ತದೆ. ದಾನಗುಣವನ್ನು ಬೆಳೆಸಿಕೊಳ್ಳುವುದು ಸುಲಭವಲ್ಲ. ಇಲ್ಲದ್ದಕ್ಕೆ ಸಲ್ಲದ್ದಕ್ಕೆ ಅನಿವಾರ್ಯ ಇಕ್ಕಟ್ಟಿನಿಂದ ಮನಬಂದಂತೆ ವೆಚ್ಚಿಸುವ ಮಾನವ ಬಡ ಜೀವಿಗಳಿಗೆ ದಾನ ಕೊಡಲು ಹಿಂಜರಿಯುತ್ತಾನೆ ಜಿಪುಣ ಗಳಿಸಿದ್ದು ಅಡವಿ ಪಾಲಾಗುತ್ತದೆ. ಇರುವಾಗ ಕೊಟ್ಟು ಉಟ್ಟು, ಉಂಡು ಅನ್ಯರಿಗೂ ತನಗೂ ಆನಂದವನ್ನು ತಂದುಕೊಳ್ಳಬೇಕು. ಗಳಿಸಿದ ಕಾಳಧನ ಕಾಳಸರ್ಪವಾಗಿ ತನ್ನನ್ನೇ ಬಲಿ ತೆಗೆದುಕೊಳ್ಳುತ್ತದೆ. ಆತ ಆತ್ಮ ಕಂಟಕನಾಗುತ್ತಾನೆ ಮುಂದುವರೆದು ಸಮಾಜ ಕಂಟಕನು ಆಗುತ್ತಾನೆ ಇದಕ್ಕೆಂದೆ ಅನುಭಾವಿಗಳು ಬಚ್ಚಿಟ್ಟವರಿಗೆ ಅಪಾಯದ ಎಚ್ಚರಿಕೆಯನ್ನು ಕೊಡುತ್ತಾರೆ.

ಪ್ರತಿಯೊಬ್ಬರಲ್ಲಿ ದಾನ ಮಾಡುವ ಗುಣ ಬರಬೇಕು ತಾನು ಸಂಪಾದಿಸಿದ ಸಂಪತ್ತಿನಲ್ಲಿಯೇ ಬೇರೆಯವರಿಗೆ ಮನಸಾರೆ ದಾನ ಮಾಡಬೇಕು. ಆ ರೀತಿ ದಾನ ಮಾಡುವುದರಿಂದ ಮುಂದೆ ತನಗೆ ಅದು ಖಂಡಿತಾ ದೊರಕುವುದು. ದಾನ ಮಾಡದೆ ಜಿಪುಣನಂತೆ ಬಚ್ಚಿಟ್ಟು ತನ್ನ ಹಸನಾದ ಬದುಕನ್ನು ಕಷ್ಟಕರವಾಗಿ ನಡೆಸುವುದರಿಂದ ಅದು ಸಮರ್ಪಣಾ ಬದುಕೆನಿಸುವುದಿಲ್ಲ. ದಾನ ಮಾಡಿ ದಾನ ಶೂರ ಕರ್ಣ ಹಾಗೂ ದಾನ ಚಿಂತಾಮಣಿ, ಅತ್ತಿಮಬ್ಬೆ ಶ್ರೇಷ್ಠರೆನಿಸಿಕೊಂಡಿದ್ದಾರೆ. ಪ್ರಾಚೀನ ಭಾರತದ ಕನ್ನಡ ನಾಡಿನ ಸಮಾಜದಲ್ಲಿ ದಾನ ಮಹೋನ್ನತವಾದ ಮೌಲ್ಯವಾಗಿದೆ ಹಿಂದಿನ ಸಮಾಜದಲ್ಲಿ ೧೬ ಪ್ರಕಾರದ ದಾನಗಳು ಪ್ರಚಲಿತವಿದ್ದವು ದಾನ ಚಿಂತಾಮಣಿ ಅತ್ತಿಮಬ್ಬೆಯೆಂಬ ಹೆಸರು ಚಿರವಾಗಿ ಉಳಿಯಲು ಅವಳ ದಾನ ಗುಣವೆ ಎಂದು ತಿಳಿದು ಬರುತ್ತದೆ. ಯಾವುದೇ ಲಾಭ ಫಲದ ಆಸೆಯಿಲ್ಲದೆ ನೀಡಿದ್ದು ನಿಜವಾದ ದಾನವಾಗುತ್ತದೆ.

ದಾನಿಗೆ ಕೀರ್ತಿ ಸಂತೃಪ್ತಿ, ಹೆಸರು ಅಷ್ಟೇ ಅಲ್ಲದೆ ಮತ್ತೊಬ್ಬರಿಗೆ ಸಹಾಯ ಮಾಡಿದೆ ಎಂಬ ಆತ್ಮ ಸಂತೃಪ್ತಿಯನ್ನು ಹೊಂದುತ್ತಾನೆ. ದಾನ ಮಾಡಿದ್ದು ಎಂದೂ ಹಾಳಾಗುವುದಿಲ್ಲ. ದೇವರು ದಾನಿಗೆ ಇನ್ನೂ ಹೆಚ್ಚಿನ ಸಂಪತ್ತು ಕೊಡುತ್ತಾನೆ. ಸಂಪತ್ತು ಯಾವುದೋ ಹೀನ ಕೃತ್ಯಕ್ಕೆ ಬಳಕೆಯಾಗಬಹುದು. ಆದ್ದರಿಂದ ಸಂಪತ್ತು ಬಚ್ಚಿಡುವುದರಿಂದ ಒಳ್ಳೆಯದಾಗುವುದಿಲ್ಲ.

ಮಾನವ ಜೀವಿಯ ಕಲ್ಯಾಣಕ್ಕೆ ಸಹಾಯ ಮಾಡುವುದು ದಾನದ ಉತ್ತಮ ಗುಣವಾಗಿದೆ. ಅದು ಜೀವನ ಮೌಲ್ಯವನ್ನು ಎತ್ತಿಹಿಡಿಯುವಲ್ಲಿ ಪ್ರೇರಕವಾಗುತ್ತದೆ. ಯಾರೇ ಆಗಲಿ ದಾನ ಮಾಡುವುದರಿಂದ ಅದು ಆಸೆ ಮತ್ತು ಅಗತ್ಯವನ್ನು ಅರಿತು ಸಮಯಕ್ಕೆ ಸರಿಯಾಗಿ ಮಾಡುವ ಅಲ್ಪದಾನವು ಅಮೋಘವಾದುದು. ಮಾಡಿದ ದಾನ ಅಕ್ಷಯ ಪಾತ್ರೆಯಂತೆ ಕ್ಷಯವಾಗದೇ ಸದಾ ತುಂಬಿರುತ್ತದೆ. ಅದರಿಂದ ಕೈಲಾಸದ ಶಿವಗಣವನ್ನು ಸಂತೃಪ್ತಿಗೊಳಿಸಿದ ಕೀರ್ತಿಗೆ ಪಾತ್ರರಾಗುತ್ತಾರೆ. ನಿರಂತರ ದಾನಿಯು ಎಂದಿಗೂ ಅಲ್ಪನಾಗಲಾರ, ಮಾಡಿದ ದಾನದಿಂದ ಕಂಗಾಲಾಗಲಾರ. ತನಗಿಲ್ಲದಿದ್ದರೂ ಇನ್ನೊಬ್ಬರ ಉಪಕಾರಕ್ಕಾಗಿ ದಾನ ಮಾಡುವವನು ಶ್ರೇಷ್ಠ ದಾನಿಯಲ್ಲದೆ ಶಿವಗಣದಲ್ಲಿಯೂ ಒಬ್ಬನಾಗಬಹುದು. ಅಂತಹ ಯೋಗ್ಯತೆ, ಸಾಮರ್ಥ್ಯ ತಂದುಕೊಡುವ ಗುಣ ದಾನದಲ್ಲಿದೆ. ಅಂತಹವರಿಗೆ ಪರಶಿವನು ಧರೆಯೊಳಗೆ ಅಪಾರ ಕೀರ್ತಿಯನ್ನು ನೀಡಿ ಚಿರಸ್ಥಾಯಿಗೊಳಿಸುತ್ತಾನೆ. ಮತ್ತು ವರ ನೀಡಿ ಹರಸುತ್ತಾನೆ. ಇದಕ್ಕೆ ಸಾಕ್ಷಿ ಎಂಬಂತೆ ರಾಘವಾಂಕನ ಮಹಾಕಾವ್ಯವಾದ ಸತ್ಯಹರಿಶ್ಚಂದ್ರ ಕೇಳಿದ್ದೆಲ್ಲವನ್ನು ನೀಡಿ ಕೊನೆಗೆ ತನ್ನ ಹೆಂಡತಿ ಮಕ್ಕಳನ್ನು ಮಾರಿ ಕೌಶಿಕನಿಗೆ ನೀಡಿದ ಸಂಪತ್ತು ದಾನವಾಗಿ ಕೊನೆಗೆ ಹರಿಶ್ಚಂದ್ರನ ಹೆಸರು ಅಜರಾಮರವಾಗಿ ಉಳಿದದ್ದನ್ನು ಕಾವ್ಯಗಳಲ್ಲಿ ಉಲ್ಲೇಖವಾಗಿರುವುದನ್ನು ಕಾಣುತ್ತೇವೆ.

ದಾನದಲ್ಲಿ ಅನ್ನದಾನ ಶ್ರೇಷ್ಠ. ಶರಣರು ಕಂಡುಕೊಂಡಂತೆ ಹಾಗೂ ಶಾಸನಗಳಲ್ಲಿರುವಂತೆ ಮಾತು ಎಂದರೆ ವಚನ, ಆಜ್ಞೆ, ಆದೇಶ ಸತ್ಯವನ್ನು ನುಡಿಯುವುದರಿಂದ ಲೌಕಿಕ ಬದುಕು ಹಸನಾಗುವುದು, ಸ್ವಾರ್ಥ, ದ್ವೇಷ, ಅಸೂಯೆ ಗುಣಗಳನ್ನು ದೂರ ಮಾಡಿ ಪರರ ದುಃಖವನ್ನು ತನ್ನ ದುಃಖವೆಂದು ಭಾವಿಸುವುದೇ ಮನುಷ್ಯನ ದೊಡ್ಡ ಗುಣ. ಮಾನವ ಬದುಕಿರುವಾಗ ಅನ್ನ ದಾನ ಮಾಡುವುದು, ಸತ್ಯವನ್ನೇ ನುಡಿಯುವುದು, ತನ್ನಂತೆ ಪರರ ಕಷ್ಟವನ್ನು ತಿಳಿಯುವುದು ಈ ಮೂರರಲ್ಲಿ ಲೋಕದ ಕ್ಷೇಮವಡಗಿದೆ. ಇದನ್ನು ಪರಿಪಾಲಿಸಿಕೊಂಡು ಬರುವವನಿಗೆ ಕೈಲಾಸ ಪ್ರಾಪ್ತಿಯಾಗುತ್ತದೆ ಎಂಬುದು ಸರ್ವಜ್ಞನ ವಚನಗಳ ಸಂದೇಶವಾಗಿದೆ. ಅನ್ನವೇ ಜನರ ಪ್ರಾಣವಾದುದರಿಂದ 'ಅನ್ನದಾನಕ್ಕಿಂತ ಮುನ್ನದಾನವಿಲ್ಲ' ಎಂದು ಹೇಳಿ ಶಿವಶರಣರ ದಾಸೋಹ ಪದ್ಧತಿನ್ನು ಜನರ ಸ್ಮರಣೆಗೆ ತರುತ್ತಾನೆ.

ದಾನದ ಫಲದಿಂದ । ಭೂನಾಥನಾಗುವನು ।
ಭಾನುವಂಡಲವ ನೊಡೆದಮಳ ಸ್ವರ್ಗಕ್ಕೆ ।
ತಾನೊಡೆಯ ನಹನು ಸರ್ವಜ್ಞ .

ದಾನಮಾಡುವ ಫಲದಿಂದ ವ್ಯಕ್ತಿ ಭೂಮಿಯ ಒಡೆಯನಾಗುವನು. ಭಾನುಮಂಡಲವೆಂದರೆ ದೇವಗಣಂಗಳ ಒಡೆಯರಿಗೆ ಅಮರನಾಗಿ ತಾನೇ ಸ್ವರ್ಗಕ್ಕೆ ಅಧಿಪತಿಯಾಗುವನು. ಇಂತಹ ದಾನವಂತಿಕೆಯು ಮಾನವನಲ್ಲಿ ಮಾನವತ್ವವನ್ನು ಬೆಳಗಿ, ದೈವತ್ವವನ್ನು ಅರಳಿಸುವ ಮಹತ್ತರವಾದ ಜೀವನ ಮೌಲ್ಯವಾಗಿ ಪರಿಣಮಿಸುತ್ತದೆ. ಸರ್ವಜ್ಞನ ವಿಚಾರದಲ್ಲಿ ಅವನ ವಿಶಾಲವಾದ ಅರ್ಥದಲ್ಲಿ 'ದೇವಭಕ್ತ' ಎಂಬ ಮತೀಯ ಪರಿಧಿಯನ್ನು ಮೀರಬಲ್ಲ ಅರ್ಥವನ್ನು ಹೊಳೆಯಿಸಬಹುದಾಗಿದೆ. ಆದ್ದರಿಂದ ಯಾಚಕನ ಸ್ಥಿತಿ ಗತಿ ಗುಣಾವಗುಣಗಳನ್ನು ಗಮನಿಸಿ ದಾನದ ದುರುಪಯೋಗ ತಪ್ಪಿಸಿ ಸತ್ಪಾತ್ರದಲ್ಲಿಯೇ ದಾನಮಾಡಬೇಕೆಂಬುದು ಸರ್ವಜ್ಞನ ಅಂತರಂಗದ ಬಯಕೆಯಾಗಿತ್ತೆಂದು ತೋರುತ್ತದೆ.ದಾನ ಮಾಡುವುದು ಮನುಷ್ಯನ ಸಂಸ್ಕೃತಿಯ ಪ್ರತೀಕ. ಇದೊಂದು ಒಳ್ಳೆಯ ಆಚಾರ. ಜನಪದರು ಬಗೆಗೆ ಬಹಳ ಒಳ್ಳೆಯ ಕಲ್ಪನೆ ಇಟ್ಟುಕೊಂಡವರು, ದಾನ ಮಾಡುವುದು ಅಂದಿಗೂ ಇಂದಿಗೂ ಮೌಲ್ಯದ ಸಂಗತಿಯಾಗಿದೆ.

ಸಿರಿತನ ಬಡತನ ಶಾಶ್ವತವಲ್ಲ ಅದು ದೇವರು ಕೊಡುವ ಸಂಪತ್ತು, ಅಂತಹ ಸಂಪತ್ತನ್ನು ದೇವರು ಯಾರಿಗಾದರು ಕೊಟ್ಟಾಗ ಯೋಗ್ಯರನ್ನು ಗುರುತಿಸಿ ಕರೆದು ದಾನ ಮಾಡಬೇಕು. ಯೋಗ್ಯರಿಗೆ ದಾನಮಾಡದೇ ಅಯೋಗ್ಯರಿಗೆ ದಾನ ಮಾಡುವುದರಿಂದ ಅದು ದಾನವಾಗುವುದಿಲ್ಲ. ಅಯೋಗ್ಯರಿಗೆ ದಾನದ ಮಹತ್ವವೂ ಗೊತ್ತಿರುವುದಿಲ್ಲ. ಹಸಿದವನು ಉಂಡಾಗ ಅವನು ಪಡುವ ರಸಸ್ವಾದದ ಅನುಭವವೇ ಬೇರೆ, ಹಸಿದಿಲ್ಲದವನು ಊಟ ಮಾಡಿದಾಗ ಅವನಿಗಾಗುವ ಅನುಭವವೇ ಬೇರೆ. ಇವೆರಡರಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ದಾನ ಮಾಡಬೇಕಾದ ಸಮಯದಲ್ಲಿ ಸರಿಯಾಗಿ ಯೋಚನೆ ಮಾಡಿ ದಾನವನ್ನು ಯಾರಿಗೆ ಮಾಡಬೇಕು ಎಂಬ ಪರಿಕಲ್ಪನೆ ದಾನಿಯಲ್ಲಿಯಲ್ಲಿರಬೇಕು ಎನ್ನುತ್ತಾನೆ. ಹಾಗಿದ್ದಾಗ ಮಾತ್ರ ದಾನ ಮಾಡಿದ ದಾನಿಗೆ ಪುಣ್ಯ ಪ್ರಾಪ್ತಿಯಾಗುತ್ತದೆ. ಅಷ್ಟೇ ಅಲ್ಲದೆ ಸಮಾಜದಲ್ಲಿ ಉನ್ನತ ಸ್ಥಾನ ಕೊನೆಗೆ ಕೈಲಾಸ ಪ್ರಾಪ್ತವಾಗುತ್ತದೆ. ಸರ್ವಜ್ಞನ ಆಶಯವೆನೆಂದರೆ ದಾನ ಮಾಡುವುದರಲ್ಲಿಯೂ ಸರಿಯಾಗಿ ಯೋಚನೆ ಮಾಡಿ ದಾನ ಮಾಡಿದರೆ ಅದರ ಫಲ ದೊರೆಯುತ್ತದೆ ಎಂಬುದು ಆತನ ವೈಚಾರಿಕ ನಿಲುವಾಗಿರಬೇಕೆಂದು ತೋರುತ್ತದೆ.

ಉಳ್ಳವರು ಇಲ್ಲದವರಲ್ಲಿ ಅಂತರ ಬೆಳೆಯುತ್ತದೆ. ಆಗ ಇಲ್ಲದವರಲ್ಲಿ ಅತೃಪ್ತಿ, ನಿರಾಶೆ, ದ್ವೇಷ, ಸೇಡು ಸಹಜವಾಗಿ ಆವಿರ್ಭವಿಸುತ್ತವೆ. ಇವುಗಳು ಕಡಿಮೆಯಾಗಿ ಕೆಲಮಟ್ಟಿನ ನೆಮ್ಮದಿಯಾದರೂ ಲಭಿಸಬೇಕಾದರೆ ಇದ್ದವರು ಇಲ್ಲದವರಿಗೆ ನೀಡಬೇಕಾಗುತ್ತದೆ. ಈ ನೀಡಿಕೆಯಲ್ಲಿ ಪ್ರದರ್ಶನ ಅಹಂಭಾವಗಳಿಲ್ಲದ ಅಂತಃಪ್ರೇರಿತವಾದ ಕರುಣೆ, ಸಹಾನುಭೂತಿ, ಅಕ್ಕರೆ, ಕರ್ತವ್ಯ ಪ್ರಜ್ಞೆ ಇರಬೇಕು. ದೇವರು ಕೊಟ್ಟದ್ದನ್ನು ದೇವರ ಮಕ್ಕಳಿಗೆ ಕೊಡುತ್ತಿದ್ದೇನೆನ್ನುವ ನಿಸ್ವಾರ್ಥ, ನಿರಹಂಕಾರಗಳು ಕೊಡುಗೆಯಲ್ಲಿ ತುಂಬಿರಬೇಕು. ಇದೇ ದಾನ, ಈ ದಾನದಿಂದ ಅಸಮತೆ, ಅಸಂತೃಪ್ತಿ ಕ್ಷೀಣವಾಗುತ್ತವೆ. ಅದಕ್ಕೆಂದೆ ಸರ್ವಜ್ಞ ಮಹತ್ವದ ಸ್ಥಾನ ಕೊಟ್ಟಿರುವುದನ್ನು ಕಾಣಬಹುದು.ಇರುವ ಸಂಪತ್ತನ್ನು ಮುಚ್ಚಿಟ್ಟರೆ ಕಳ್ಳಕಾಕರಿಂದ ರಕ್ಷಿಸುವ ಭಾರ ಹೆಚ್ಚಾಗುತ್ತದೆ. ಇಲ್ಲದವರಿಗೆ ಸಹಾಯ ಮಾಡಿದರೆ ಆ ದಾನವು ಅನ್ಯರೂಪದಲ್ಲಿ ಲಾಭವಾಗಿ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ. ಹಾಗೂ ಇಲ್ಲದವರ ಗೋಳು ನಿವಾರಣೆಯಾಗುತ್ತದೆ.

ಮಾಡಿದ ದಾನವೆಂಬುದು ಎಲ್ಲಿ ಹೋಗಲಾರದು. ಸತ್ತಿಗೆ (ಛತ್ರಿ,ಕೊಡೆ)ಯ ಕೆಳಗಿನ ನೆರಳಿನಂತೆ ಹಿಂಬಾಲಿಸಿಕೊಂಡು ಬರುತ್ತದೆ. ಮಾಡಿದ ಪುಣ್ಯದ ದಾನ ಗೊತ್ತಿಲ್ಲದೆ ಇದ್ದರೂ ಮೊದಲು ಮಾಡಿದ ದಾನದ ಫಲವು ಬೆನ್ನ ಬಿಡದೆ ಹಿಂಬಾಲಿಸಿ ಬರುತ್ತದೆ. ಪೂರ್ವಜನ್ಮದಲ್ಲಿ ಮಾಡಿದ ಪುಣ್ಯದ ಫಲವೇ ಸಾಕ್ಷಿಯಾಗಿ ನೆರಳಿನಂತೆ ಸದಾ ಹಿಂದಿರುತ್ತದೆ. ಸರ್ವಜ್ಞನ ಈ ಉಕ್ತಿಗಳನ್ನು ಸಮಾಲೋಚಿಸಿದಾಗ ಸ್ಪಷ್ಟವಾಗುವ ಅಂಶವೆಂದರೆ ಸಾಮಾಜಿಕ, ಧಾರ್ಮಿಕ, ಸಾಂಸಾರಿಕ ಜೀವನದಲ್ಲಿ ಮಾಡಿದ ದಾನದ ಫಲ ರಕ್ಷಣೆಯಾಗಿ ನಿಲ್ಲುತ್ತದೆ. ಮುಂದಿನ ಜನ್ಮದ ಜೀವನೋಪಯೋಗಿಯು ಸಂಪತ್ತಾಗಿ ರಕ್ಷಿಸುವಲ್ಲಿ ದಾನದ ಗುಣ ಹಿರಿದಾದುದು. ದಾನಿಯ ಲಕ್ಷಣವನ್ನು ಕುರಿತು ಹೇಳುವಾಗ ಮಾನವ ಹುಟ್ಟುವಾಗ ಈ ಸಂಪತ್ತನ್ನು ಸಂಗಡ ತೆಗೆದುಕೊಂಡು ಬರುವುದಿಲ್ಲ. ಸಾಯುವಾಗ ಅದನ್ನು ಹೊತ್ತುಕೊಂಡು ಹೋಗುವುದಿಲ್ಲ. ನಡುವೆ ಬದುಕಿದ್ದಾಗ ಸಂಪಾದಿಸಿದ ದ್ರವ್ಯವನ್ನು ಪರರಿಗೆ ದಾನ ಮಾಡಿ ಆಮೇಲೆ ಊಟ ಮಾಡುವವನೇ ಶ್ರೇಷ್ಠ ದಾನಿ. ಸಂಪತ್ತು ಇರುವಾಗ ಅದರ ವ್ಯಾಮೋಹಕ್ಕೆ ಒಳಗಾಗದೆ ದೀನ ದಲಿತರಿಗೆ ಕೊಟ್ಟು ಅವರ ನೋವು ದುಃಖಗಳಿಗೆ ಸ್ಪಂದಿಸಿ ದಾನಿಗಳೆನಿಸುವುದು ಶ್ರೇಯಸ್ಕರ, ಎಂಬಲ್ಲಿ ಲೋಕದ ಸರ್ವರ ಸಮಾನತೆಯಿಂದ ಇರಬೇಕೆಂಬುದು ದಾನದ ಆಶಯವಾಗಿದೆ.ದಾನವನ್ನು ನೀಡುವವನು ಇಂದುಧರನಂತೆ

ಕಂಗೊಳಿಸುತ್ತಾನೆ. ಆತ ಯಾವಾಗಲೂ ತಾಯ್ತಂದೆಯರಂತೆ ನೀಡುವ ಗುಣವನ್ನೇ ಹೊಂದಿರುತ್ತಾನೆ.

ಏನನ್ನು ಬೇಡಬೇಕಾದರೂ ಜಿಪುಣನನ್ನು ಬೇಡಬಾರದು. ದಾನಿಯಾಗಿರುವವನನ್ನೇ ತಿಳಿದು ಬೇಡಬೇಕು. ಹೇನನ್ನು ಕುಕ್ಕಿ ತಿನ್ನುವಂತಹ ನೀಚನನ್ನ ಬೇಡಿದರೆ ಅವನು ಏನನ್ನು ಕೊಡಬಲ್ಲನು, ಎಂಬ ಮಾತಿನಲ್ಲಿ ಬೇಡುವಾತನಿಗಿಂತ ಜಿಪುಣನಾದವನಿಗೆ ಕವಿ ಸರ್ವಜ್ಞನಾಡಿದ ಮಾತು ಇಂದಿನ ದಿನದಲ್ಲಿ ಎಂತಹ ನೀಚ ಸ್ವಭಾವದ ಜನರಿರುತ್ತಾರೆ ಎಂಬುದು ವೇದ್ಯವಾಗುತ್ತದೆ. ದುರ್ದೈವವೆಂದರೆ ಜಿಪುಣರು ತಿನ್ನಬಾರದ್ದನ್ನು ತಿಂದು ಬದುಕುತ್ತಾರೆ, ಎಂಬುದಕ್ಕೆ ಈ ಉಕ್ತಿ ಸಾಕ್ಷಿಯಾಗುತ್ತದೆ. ಆದ್ದರಿಂದ ಕವಿ ಬೇಡುವುದಾದರೆ ದಾನಿಯನ್ನೇ ಬೇಡಿ ಎಂದು ಯಾಚಕನಿಗೆ ವಿವೇಕದ ಮಾರ್ಗದರ್ಶನ ಮಾಡುತ್ತಾನೆ. ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟ ಸರ್ವಜ್ಞ ಬೇಡುವುದಾದರೆ ಕೊಡುವ ಧರ್ಮಿಯನ್ನೇ ಬೇಡು. ಪೀಡಿಸಿ, ಕಾಡಿಸಿ ಕೊಡದೇ ಇರುವ ಕಡು ಮೂರ್ಖರನು, ಕಡು ಮೂಢರನು ಕೇಳಬೇಡ. ಅಂತಹ ಪಿಸುಣಿಗಳು ನಿಂದಿಸುವರೇ ಹೊರತು ಕೊಡುವ ಯೋಗ್ಯತೆ ಅವರಲ್ಲಿರುವುದಿಲ್ಲ

ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ ಎಂಬಂತೆ, ಕನಿಷ್ಠವೆಂದು ಭಾವಿಸಲಾಗುವ ಕಾಗೆಯು ಆಹಾರ ಸಿಕ್ಕಾಗ ತಾನೊಂದೆ ತಿನ್ನದೆ ತನ್ನ ಇಡೀ ಪರಿವಾರವನ್ನೇ ಕೂಗಿ ಕರೆಯುತ್ತದೆ. ಅದೇ ಭಿಕ್ಷುಕನೋರ್ವ ಆಹಾರ ಪಡೆಯುವಾಗ ಇತರ ಬಿಕ್ಷುಕರನ್ನು ಕರೆಯುವುದಿಲ್ಲ. ಮನುಷ್ಯನ ಸ್ವಭಾವವನ್ನು ಕಾಗೆಯೊಂದಿಗೆ ಹೋಲಿಸಿ ನೋಡುವಾಗ ಕಾಗೆಯೇ ಉನ್ನತಿಯಲ್ಲಿರುವುದನ್ನು ನಮ್ಮ ಪ್ರಾಚೀನರು ಗುರುತಿಸಿ ಹೇಳುವ ಮಾತು ನಿಜಕ್ಕೂ ಕಣ್ಣು ತೆರೆಸುವಂತಹದ್ದು. ವ್ಯಕ್ತಿಯ ಜೀವನ ಪರಿಪೂರ್ಣವಾಗುವುದು ಕೊಡುವ ಮನಸ್ಥಿತಿಯಿಂದಯೆನ್ನುವುದು ಸಾರ್ವಕಾಲಿಕ ಸತ್ಯ. ದಾನ ಮಾಡದವ ಪಶು ಸಮಾನಯೆಂಬುದು ಎಲ್ಲರ ಅಭಿಮತ. ಜಗತ್ತಿನಲ್ಲಿ ಧರ್ಮ ಉಳಿದಿರುವುದು ದಾನದ ಮಹತ್ವವನ್ನು ಅರಿತಿರುವದರಿಂದ. ಪಡೆಯುವುದಕ್ಕಿಂತ ಕೊಡುವುದರಲ್ಲಿ ಅನುಪಮ ಸುಖವಿದೆ ಎಂಬುದನ್ನು ಅರಿತು ದಾನ ಮಾಡಬೇಕೆಂಬುದು ಸರ್ವಜ್ಞನ ಅಭಿಮತವಾಗಿದೆ. ಜೀವನದಲ್ಲಿ ಸುಖದ ವೈಭೋಗ ಪಡೆಯಬೇಕಾದರೆ ದಾನವೀಯಲೇಬೇಕು ಮಾನವ ಜೀವನದಲ್ಲಿ ಮರಣವೆಂಬುದು ಸತ್ಯ ಇದು ಹರನಾಣೆಗೂ ಸತ್ಯ. ಹುಟ್ಟು ಸಾವುಗಳ ಮಧ್ಯದಲ್ಲಿ ತನ್ನ ಬದುಕಿನ ದೀರ್ಘಾಯುಷ್ಯದಲ್ಲಿ ಐಶ್ವರ್ಯವನ್ನು ಮನಬಂದ ಹೆಣ್ಣುಗಳ ಮೆಲೆ ಸುರಿಯಬಾರದು.. ಅದು ಅನ್ಯರ ತುತ್ತಾಗುತ್ತದೆ. ಅದನ್ನು ಪರರಿಗೆ ದಾನ ಮಾಡಬೇಕು. ಶರಣರ ಮಹಿಮೆಯನ್ನು ಮರಣದಲ್ಲಿ ಕಾಣು ಎಂಬಂತೆ' ದಾನದ ಮಹಿಮೆ ಸತ್ತಾಗ ಇಡೀ ವಿಶ್ವಕ್ಕೆ ಗೊತ್ತಾಗುತ್ತದೆ. ದಾನದ ಫಲ ಪ್ರತಿಧ್ವನಿಯಾಗಿ ಪ್ರತಿಫಲಿಸುತ್ತದೆ. ದಾನ ಮಾಡುವ ಗುಣ ಸಹಜವಾಗಿ ಎಲ್ಲರಲ್ಲೂ ಇರಲಾರದು ಎಂಬುದು ಅರಿವಾಗುತ್ತದೆ.

ಕೆಲವರು ಯಾವುದೊ ಯಾರದೊ ಒತ್ತಡಕ್ಕೆ ಮಣಿದು, ಕೊಡುವ ಮನಸ್ಸಿಲ್ಲದಿದ್ದರೂ ದಾನ ಮಾಡಲು ಮುಂದೆ ಬರುತ್ತಾರೆ. ವಯಕ್ತಿಕ ಪ್ರಚಾರಕ್ಕಾಗಿ ದಾನ ಮಾಡುತ್ತಾರೆ. ದಾನ ಮಾಡಿದ ಮೇಲೆ ಮನಸ್ಸಿನಲ್ಲಿ ಸಂಕಟ ವೇದನೆ ನೋವು ಅನುಭವಿಸುತ್ತ ಕೊರಗುತ್ತಾರೆ. ಮನಸ್ಸಿನಲ್ಲಿ ಕಸಿವಿಸಿ ಮಾಡಿಕೊಂಡು ಮಾಡಿದ ದಾನ ಫಲಿಸುವುದಿಲ್ಲ. ಕೈ ಎತ್ತಿ ದಾನ ಮಾಡಿದರೆ ಅದರ ಅನುಭವ ಅನೂಭೂತಿ ಅನುಭವಿಸಿದವನಿಗೆ ಮಾತ್ರ ಗೊತ್ತು, ಮತ್ತೆ ಮತ್ತೆ ದಾನ ಮಾಡಬೇಕೆಂದು ಮನಸ್ಸು ಹಂಬಲಿಸಬೇಕು. ದಾನ ಮಾಡಿದರೆ ಸಂಪತ್ತು ಹಾಳಾಗುತ್ತದೆ, ಬಡತನ ಬರುತ್ತದೆ ಎಂಬ ಚಿಂತೆ ಕೊಟ್ಟ ಮೇಲೆ ಕಾಡಬಾರದು. ಮಾಡಿದ ದಾನ ನಿನಗೆ ಕಟ್ಟಿಟ್ಟ ಬುತ್ತಿ. ಅದು ಶಿವನಲ್ಲಿ ಸಂಗ್ರಹವಾಗಿ ಮುಂದೆ ಎಂದಾದರೂ ಫಲ ನೀಡುತ್ತದೆಂಬ ಲೋಕೋತ್ತರವಾದ ಪರಿವರ್ತನೆ ಮಾಡುವ ಶಕ್ತಿ ದಾನಕ್ಕಿದೆ. ನಶ್ವರ ದೇಹದ ಒಡವೆಗಳು ಸಂಪತ್ತು ಅಳಿದು ಹೋಗುವುದಕ್ಕಿಂತ ಮೊದಲು ಈ ಭೂಮಿಯ ಮೇಲೆ ಯೋಗ್ಯರನ್ನು ಹುಡುಕಿ ಅವರಿಗೆ ನಿಸ್ವಾರ್ಥದಿಂದ ದಾನ ಮಾಡಬೇಕು. ಸಂಗ್ರಹ ಮಾಡುವುದು, ಕೂಡಿಡುವುದು ಅಮಾನ್ಯವಾದ ಪದ್ಧತಿ. ಅದು ಮಾನವಲ್ಲಿ ಹೋಗಬೇಕೆಂಬ ಬಯಕೆ ಅಡಗಿದೆ. ನಿರಂತರ ದಾನ ಮಾಡುವ ದಾನಿಯು ಸದಾ ಹಸನ್ಮುಖಿಯಾಗಿ ಉಂಡುಟ್ಟು ಆತ್ಮಶಾಂತಿಯಿಂದ ಪರಮಾತ್ಮನಲ್ಲಿ ಒಂದಾಗುತ್ತಾನೆ. ಕೂಡಿಟ್ಟ ಸಂಪತ್ತನ್ನು ಮತ್ತೊಬ್ಬರಿಗೆ ನೀಡದೆ ಇರುವವನು ಆ ಸಂಪತ್ತನ್ನು ತಾನೂ ಅನುಭವಿಸದೆ ಯಾವ ದಾನ-ಧರ್ಮ ಕಾರ್ಯಗಳಿಗೆ ತನ್ನನ್ನು ತೊಡಗಿಸಿಕೊಳ್ಳದೆ ಇರುವವನು ಕೂಪ ನರಕಕ್ಕೆ ಹೋಗುವುದು ಸತ್ಯವೆಂದು ಹೇಳುತ್ತಾನೆ. ಈ ಲೋಕದೊಳು ಹುಟ್ಟಿದಾತ ತನ್ನಿಂದಾದಷ್ಟು ಕೊಡಲೇಬೇಕು. ಈ ಪರಿಕಲ್ಪನೆ ಇಹ-ಪರಗಳ ಬದುಕಿಗೆ ಸಂಬಂಧಿಸಿದ್ದು. ಆ ಇಹ-ಪರ ಬದುಕು ಹಸನಾಗಬೇಕಾದರೆ ದಾನ ಮಾಡಲೇ ಬೇಕು ಎಂಬ ಸತ್ಯವನ್ನು ಕಾಣಬಹುದು.

ಯಾರಿಂದಾದರೂ ಅರ್ಪಣೆಯನ್ನು ಪಡೆದಾಗ, ಆ ಅರ್ಪಣೆದಾರನ ಪಾಪವನ್ನು ಹೊರಬೇಕಾಗುತ್ತದೆ. ಸಾಧನೆಯ ಮೂಲಕ ಅವನ ಉದ್ಧಾರವಾಗುತ್ತದೆ. ಈ ಕಾರಣಕ್ಕಾಗಿಯೇ ಸಮರ್ಥ ರಾಮದಾಸಸ್ವಾಮಿಗಳು ಕೊಡುವವರ ಪಾಪ ಮುಗಿಯಬೇಕೆಂದು ಬೊಗಸೆಯಷ್ಟು ಭೀಕ್ಷೆಯನ್ನು ಪಡೆಯುತ್ತಿದ್ದರು. ಅರ್ಪಣೆಯನ್ನು ಪಡೆಯುವವನಿಗೆ ಅರ್ಪಣೆ ಕೊಡುವವನ ಪಾಪವನ್ನು ತೀರಿಸಲು ಸಾವಿರಾರು ಪಟ್ಟು ಸಾಧನೆಯನ್ನು ಮಾಡಬೇಕಾಗುತ್ತದೆ. ಆಗ ಮಾತ್ರ ಆ ಪಾಪವು ತೀರುತ್ತದೆ. ಇಲ್ಲದಿದ್ದರೆ ಅದರ ವಿಪರೀತ ಪರಿಣಾಮ ಪಡೆಯುವವನ ಮೇಲಾಗುತ್ತದೆ. ಉದಾಃ ಬೀಕ್ಷುಕನಿಗೆ ಹಣವನ್ನು ಕೊಟ್ಟರೆ, ಆ ಬೀಕ್ಷುಕನು ಆ ಹಣದಿಂದ ಮದ್ಯವನ್ನು ಕುಡಿದರೆ, ಅದರ ಪಾಪ ಕೊಟ್ಟವರಿಗೆ ತಟ್ಟುತ್ತದೆ. ಏಕೆಂದರೆ ಕೊಟ್ಟ ದಾನವು ಸತ್ಪ್ರಯೋಜನವಾಗುವದಿಲ್ಲ. ಆದ್ದರಿಂದ ಅರಿತು ದಾನ ಮಾಡಬೇಕು.ನಿರ್ಗತಿಕರಾದವರು, ದೀನರಾದವರು ಹೊಟ್ಟೆಪಾಡಿಗಾಗಿ ಹಸಿದು ಬಂದಾಗ ನೀಡದೇ ಹಿಂದಕ್ಕೆ ಕಳುಹಿಸಿ ಅವರ ಹೊಟ್ಟೆ ತುಂಬಿದಾಗ ಅವರನ್ನು ಕರೆದು ಮೃಷ್ಟಾನ್ನ ನೀಡಿದರು ಅದು ಫಲಿಸುವುದಿಲ್ಲ. ಆ ರೀತಿ ಯಾಚಕರ ಮನಸ್ಸನ್ನು ನೋಯಿಸುವುದು ಧರ್ಮ ಗುಣವಲ್ಲ. ಆದ್ದರಿಂದ ಆಗಲೇ, ಈಗಲೇ, ಹೋಗಲೇ ಎಂದು ಸತಾಯಿಸಿ ಕೊಡುವ ದಾನಕ್ಕಿಂತ ಆ ಕ್ಷಣ ಕೊಡುವ ದಾನ ನಿನಗೆ ಸಂತೃಪ್ತಿಯನ್ನು ನೀಡುತ್ತದೆ. ಯಾಚಕರಿಗೆ ಕೊಡಬೇಕೆಂದರೆ ಅದಕ್ಕೆ ಹೊತ್ತು, ಗೊತ್ತು ಇರಲಾರದು ಆ ರೀತಿ ಹೊತ್ತು, ಗೊತ್ತನರಿತು ಮಾಡುವುದು ದಾನವಾಗಲಾರದು. ಕೊಡಬೇಕೆನ್ನುವ ಮನಸ್ಸಿದ್ದರೆ ಕಾಯಿಸದೆ ಕೊಡಬೇಕು. ಆ ರೀತಿ ದಾನ ಮಾಡುವುದಕ್ಕಿಂತ ದಾನ ಮಾಡದಿರುವುದೇ ಲೇಸು.

ಅದು ಧರ್ಮ ಹಾನಿ ಆ ರೀತಿ ಮಾಡಿದ ದಾನ ಹುಡಿಮಣ್ಣಿಗೆ ಸಮ. ಅದು ಫಲಕಾರಿಯಾಗಿ ಮರಳಿ ನಿನಗೆ ಫಲಿಸಲಾರದು. ಆ ಯಾಚಕನ ಸಂಕಟ ನೋವಿನಲ್ಲಿ ನೀನು ನೀಡದ ದಾನ ಮಣ್ಣಲ್ಲಿ ಮಣ್ಣಾಗಿ ಹೋಗುವುದು ಎಂಬ ಎಚ್ಚರಿಕೆಯ ಸಂದೇಶವನ್ನು ನೀಡುವಲ್ಲಿ ಕಟುನುಡಿಗಳನ್ನಾಡಿದ್ದಾನೆ. ದಾನದ ಎಚ್ಚರಿಕೆಯನ್ನು ಅರಿತ ಸರ್ವಜ್ಞ ಅತ್ಯಂತ ಅಗತ್ಯವಿರುವಾಗ ಕೊಟ್ಟ ಒಂದು ನುಚ್ಚಿಗು ಮಾಣಿಕ್ಯದ ಬೆಲೆ ಬರುತ್ತದೆ. ಅನಗತ್ಯವಾದಾಗ ಮಾಣಿಕ್ಯ ಕೊಟ್ಟರೂ ಅದು ನುಚ್ಚಿಗಿಂತಲೂ ಕನಿಷ್ಟವಾಗುತ್ತದೆ. ದಾನದ ಹಿರಿಮೆ ಇರುವುದು ಆ ವಸ್ತುವಿನಲ್ಲಲ್ಲ ಆ ದಾನದ ಹಿಂದಿನ ಸದುದ್ದೇಶದಲ್ಲಿ. ದಾನಗುಣ ಮಾನವ ರೂಢಿಸಿಕೊಳ್ಳಬೇಕಾದ ಅತ್ಯಂತ ಆದರ್ಶ ಗುಣಗಳಲ್ಲೊಂದು ಎಂಬ ಮಾರ್ಗದರ್ಶನ ಮಾಡುತ್ತಾನೆ.

ಮನುಷ್ಯನಾಗಿ ಹುಟ್ಟಿದ ಮೇಲೆ ಸಿರಿವಂತಿಕೆ, ಬಡತನ, ಸಹಜವಾಗಿ ಬರಬಹುದು. ಸಿರಿವಂತನಾದರೆ ಹೇಗೋ ದಾನ ಮಾಡಬಹುದು, ತಿರುಕನಾದರು ದಾನ ಮಾಡಬಹುದು. ಹತ್ತಿರ ಇಲ್ಲದಿದ್ದರೆ ತಿರಿದು

ತಂದಾದರು ಜಂಗಮರನ್ನು ಕರೆದು ದಾನವ ಮಾಡು ಅದರಿಂದ ಪುಣ್ಯಪ್ರಾಪ್ತಿಯಾಗುತ್ತದೆ. ಕೈಲಾಸವೇ ನೆರಮನೆಯಾಗುತ್ತದೆ ಅದರಿಂದ ಮೋಕ್ಷವು ಪ್ರಾಪ್ತಿಯಾಗುತ್ತದೆ ಎಂದು ದಾನದ ಮಹತ್ವವನ್ನು ಎತ್ತಿ ಹೇಳುತ್ತದೆ. ದಾನ ಮಾಡುವುದಾದರೆ ಭಟ್ಟಂಗಿಗಳಿಗೆ ಡೋಂಗಿಗಳಿಗೆ ದಾನಮಾಡಿ ಕೆಡಬೇಡ ಅವರು ದಾನಕ್ಕೆ ವಂದಿತರಲ್ಲ. ಅಂಥವರು ಉಂಡಮನೆಗೆ ಎರಡು ಬಗೆಯುತ್ತಾರೆ, 'ಉಂಡಮನೆ ಸೂರೆಣಿಸುವವನಂತೆ' ಅವರು ಕೇಡನ್ನೇ ಬಯಸುತ್ತಾರೆ ಅಂತಹವರಿಗೆ ದಾನ ನೀಡಿ ಮಾನ ಹಾನಿ ಮಾಡಿಕೊಳ್ಳುವುದಕ್ಕಿಂತ ಸೃಷ್ಟಿಗೆ ಈಶ್ವರರಂತಿರುವ ಶರಣರಿಗೆ ಕೊಟ್ಟು ಪರಮ ಪದವಿಯನ್ನು ಪಡೆಯುವಲ್ಲಿ ತೃಪ್ತಿ ಇರುತ್ತದೆ.

ಮನೆಯಲ್ಲಿ ಹಬ್ಬ–ಹರಿದಿನಗಳಲ್ಲಿ ತಮ್ಮ ಬಂಧುಗಳೊಡನೆ ಕೂಡಿ ಸಂತೊಷದಿಂದ ಊಟ ಮಾಡುವಾಗ ಯೋಗಿ ಬಂದು ಭೀಕ್ಷೆ ಬೇಡಲು ಅವನಿಗೆ ಈಯದೆ ಹಾಗೆ ಕಳಿಸಿದರೆ ಅದು ಧರ್ಮವಲ್ಲ, ಸಾಧುವೂ ಅಲ್ಲ. ಅಂಥಹದೇನಾದರು ಮಾಡಿದರೆ ಅವರ ಜೀವನ ಕಾಗೆಗಿಂತಲೂ ಕಡೆ ಹಾಗೂ ನರಕ ಯಾತನೆ ಅನುಭವಿಸುವುದು ಸತ್ಯ. ದಾನ ಪದ್ಧತಿಯಲ್ಲಿ ಜನಜೀವನದ ಪ್ರಗತಿಗೆ ಅವರ ಶೋಭೆಗೆ ಅಗತ್ಯ ಯಾವುದು ಎಂಬುದನ್ನು ಅಂತಃಕರಣ ಪೂರ್ವಕವಾಗಿ ಲೋಕಾನುಭವದಿಂದ ವಿಚಾರಿಸಬೇಕು.

ದಾನ ಕೊಡುವವರಲ್ಲಿ ಮೂರು ಪ್ರಕಾರದ ದಾನಗಳಿವೆ ಆಡದೇ ಕೊಡುವವನು, ಆಡಿ ಕೊಡುವವನು, ಆಡಿ ಕೊಡದವನು, ಈ ಮೂವರಲ್ಲಿ ಆಡದೇ ಕೊಡುವವನು ಉತ್ತಮ, ಆಡಿ ಕೊಡುವವನು ಮಧ್ಯಮ, ಆಡಿ ಕೊಡದವನು, ತಾ ಅಧಮ. ಸಮಾಜದಲ್ಲಿ ಈ ರೀತಿಯ ದಾನಿಗಳಿರುತ್ತಾರೆಂಬುದನ್ನು ಪ್ರಚುರಪಡಿಸುತ್ತಾನೆ. ಬೇಡುವುದಕ್ಕಿಂತ ಮೊದಲೇ ಕೊಡುವವನು ನಾಡಿನೊಳಗುತ್ತಮ, ಬೇಡಿದ ಮೇಲೆ ದಾನ ಕೊಡುವವನು ಮದ್ಯಮ, ಬೇಡಿದರೂ ಕೊಡದೇ ಇರುವವನು ತಾನಧಮ ಎನ್ನುವ ಉಕ್ತಿಯಲ್ಲಿ ದಾನಿಗಳ ಅಂತರಂಗದ ಬಯಕೆ ಏನಿರುತ್ತದೆ ಅವರ ಮನಸ್ಸಿನ ವಿವಿಧ ಚಿತ್ರಣವನ್ನು ಎತ್ತಿ ತೋರಿಸುತ್ತದೆ.

ಸೊಡರೆಣ್ಣೆ ತೀರಿದರೆ । ಕೊಡನೆತ್ತಿ ಸುರಿದಿಹರೆ? ।
ಕೊಡಬೇಡ, ಕೊಡದೆ ಇರಬೇಡ, ದಾನವನು ।
ಬಿಡಬೇಡವೆಂದ ಸರ್ವಜ್ಞ ॥೬೩೭॥

ಉರಿಯುವ ದೀಪದ ಎಣ್ಣೆ ತೀರಿದಾಗ ಎಣ್ಣೆಯ ಕೊಡವನ್ನು ಎತ್ತಿ ಸುರಿದರೆ ದೀಪ ಅಳಿದು ಹೋಗುತ್ತದೆ. ದೀಪಕ್ಕೆ ಬೇಕಾದಷ್ಟು ಎಣ್ಣೆ ಹಾಕಿದರೆ ದೀಪ ಹೊತ್ತಿ ಬೆಳಗುತ್ತದೆ. ಹಾಗೆಯೆ ದಾನವನ್ನು ಬೇಡುವವರಿಗೆ ಅಗತ್ಯವಿದ್ದಷ್ಟು ನೀಡಿದರೆ ಅದರ ಪ್ರಯೋಜನವಾಗುತ್ತದೆ. ತೂಕತಪ್ಪಿ ಮಾಡುವ ದಾನ ಸತ್ಪಾತ್ರಕ್ಕೆ ಸಲ್ಲಲಾರದು. ಅದು ಭ್ರಷ್ಟತೆಗೆ ದಾರಿ ಮಾಡಿಕೊಡುತ್ತದೆ. ಇಲ್ಲಿ ಯಾವ ಪ್ರಶ್ನೆ ಅಡಗಿದೆ ಎಂದರೆ 'ದಾನ'ವೆಂಬುದು ಒಂದು ಸಾರಿ ಮಾಡಿ ಮುಗಿಸುವುದಲ್ಲ ಅದು ನಿರಂತರ ಕ್ರಿಯೆಯಾಗಬೇಕು ಎಂಬ ಪರಿಕಲ್ಪನೆ ದಾನದ ಬಗೆಗಿರುವ ಮಹತ್ವವನ್ನು ಅರಿತಿರಬೇಕು.

ಪ್ರಿಯವಾದುದಷ್ಟನ್ನೇ ಮಾಡಬೇಕು, ಹೊಟ್ಟೆ ತುಂಬಿದ ಮೇಲೆ ಊಟವನ್ನು ಹೊಟ್ಟೆಯ ಮೇಲೆ ಕಟ್ಟಿಕೊಳ್ಳಲಾಗುತ್ತದೆಯೇ? ದಾನದ ಅವಶ್ಯಕತೆ ಅದರ ಅನಿವಾರ್ಯತೆಯನ್ನು ಲೋಕದ ಜನರಿಗೆ ತಿಳಿಸುತ್ತಾನೆ. ಸುಡುವ ತುಪ್ಪವನ್ನು ಯಾರು ಕೊಡವನೆತ್ತಿ ಸುರಿಯುವುದಿಲ್ಲ. ಹನಿ ಹನಿಯಾಗಿ ಎರೆಯುತ್ತಾರೆ. ತುಪ್ಪದ ಅವಶ್ಯಕತೆ ಇರುವುದು ಅಷ್ಟೆ. ನಾನು ಬಡವನಿದ್ದೇನೆ ನಾನೇನು ಕೊಡಲಿ ಎಂಬ ಭಾವನೆ ಬೇಡ ನಿನ್ನಿಂದ ಎಷ್ಟು ಸಾಧ್ಯವೋ ಅಷ್ಟನ್ನಾದರೂ ದಾನ ಮಾಡುವ ಗುಣ ಇರಬೇಕೆಂದು ಉಪದೇಶಿಸುತ್ತಾನೆ. ದಾನಕ್ಕೆ ಮೇಲು ಕೀಳು ಬಡತನ ಸಿರಿತನ ಯಾವುದೂ ಅಡ್ಡಿಯಾಗದು ಮಾಡುವ ಮನಸ್ಸಿದ್ದರೆ ಸಾಕು, ಎಂಬ ಲೋಕೋತ್ತಮ ಜಾಗೃತಿಯನ್ನು ಎಲ್ಲರಲ್ಲಿಯೂ ಮೂಡಿಸುತ್ತಾನೆ. ಇದರಿಂದ ಲೋಕದಲ್ಲಿ ಎಲ್ಲರೂ ದಾನ ಮಾಡುವ ಗುಣ ಹೊಂದಬೇಕೆಂಬ ಅರಿವಿನ ಆಶಯ. ಕಾಗೆಯೊಂದಗುಳು ಕಂಡರೆ ಕೂಗಿ ಕರೆಯದೆ ತನ್ನ ಬಳಗವ ಎಂಬಂತೆ ಸಂಪತ್ತನ್ನು ಹಂಚಿಕೊಂಡು ಅನುಭವಿಸುವ ಗುಣವಿರಬೇಕು.

ಹಸಿವು ಮಾನವನಿಗೆ ಸಹಜ, ಹಸಿವನ್ನು ನೀಗಿಸಿಕೊಳ್ಳಲೆಂದೇ ಈ ಜಗದಲ್ಲಿ ಕೋಲಾಹಲವೆದ್ದಿದೆ. ಹಸಿವಾದಾಗ ಅನ್ನವನ್ನು ಹಾಕುವವನು ಜಾತಿಯಿಂದ ಹೀನನಾದರೂ ಕುಲಜನೆ, ಶ್ರೇಷ್ಠ ಜಾತಿಯವನಾಗಿ ಕಾಣುತ್ತಾನೆ. ಹಸಿದು ಬಂದವರಿಗೆ ಅನ್ನವನ್ನು ಹಾಕದೆ ತಾನೇ ಉಂಡು ಭೋಗಿಸುವವನು ಶ್ರೇಷ್ಠ ಜಾತಿಯವನಾಗಿದ್ದರೂ, ಅವನು ಹೀನ ಜಾತಿಯವನೆಂದೇ ತಿಳಿಯಬೇಕು. ಅನ್ನವನು ನೀಡಿ ಸಂಕಟ ವೇದನೆ ಪಡಬಾರದು ಅದು ಯೋಗ್ಯ ದಾನಿಯ ಲಕ್ಷಣವಲ್ಲ, ಯಾವ ಭಿನ್ನ ಭೇದಗಳಿಲ್ಲದೆ ಶಿವ ಈ ಜಗದ ಜೀವರಾಶಿಗಳಿಗೆ ನಿತ್ಯ ನೀಡಿ ಸಲಹುತ್ತಿಲ್ಲವೆ?. ಅರಿತು ತನ್ನ ಕಾಯಕವನ್ನಾದರೂ ಬಿಟ್ಟು ಮರೆತು ಧರ್ಮವ ಮಾಡಬೇಕು, ಎಂಬ ಮಾತಿನಲ್ಲಿ ಸರ್ವ ಜೀವಿಯ ಕ್ಷೇಮದ ವಿಶಾಲ ಅರ್ಥವಡಗಿದೆ.

ಮರೆತು ಧರ್ಮವ ಮಾಡು ಎಂದರೆ ಧರ್ಮದ ಕಾರ್ಯ ಮಾಡುವಾಗ ಹಿಂದೆ ಮುಂದೆ ನೋಡಬಾರದು. ದಾನ ಮಾಡುವ ಸಂದರ್ಭದಲ್ಲಿ ತನ್ನ ಕಾಯಕವನ್ನಾದರು ಮರೆತು ಧರ್ಮವನ್ನು ಮಾಡಬೇಕು. ಬೀದಿಯಲ್ಲಿ ಇರುವ ಮಕ್ಕಳು ರೊಟ್ಟಿಗಾಗಿ ಬೇಡುವಾಗ ಅವರಿಗೆ ರೊಟ್ಟಿಯ ತುಣುಕೊಂದನ್ನು ನೀಡದೆ ತಾನು ಮಾಡುವ ಕಾಯಕದಲ್ಲಿ ನಿರತನಾದರೆ ಅದು ಮಹಾಪಾಪ. ಹಸಿದು ಬಂದವರಿಗೆ ಕನಿಷ್ಠ ನುಚ್ಚನ್ನು ದಾನ ಮಾಡಿದರೂ ಆ ಸಂದರ್ಭಕ್ಕೆ ಅದು ಬೆಲೆ ಬಾಳುವ ರತ್ನದಷ್ಟೇ ಬೆಲೆಯನ್ನು ಕೊಡುತ್ತದೆ. ಬೇಡಿ ಬಂದವರ ಹಸಿವು ನೀಗಿಸದಿದ್ದರೆ ಆ ರತ್ನ ನುಚ್ಚಿಗಿಂತಲೂ ಕಡಿಮೆ ಯೋಗ್ಯತೆಯನ್ನು ಪಡೆದುಕೊಳ್ಳುತ್ತದೆ. ಇದನ್ನು ಶಿವನೊಪ್ಪಲಾರ. ಆದ್ದರಿಂದ ದಾನದ ಸಂದರ್ಭದಲ್ಲಿ ಕಾಯಕ ಮರೆತು ದಾನ ಮಾಡಿದರೆ ಶಿವನು ಒಲಿದು ಪರಮ ಪದವಿಯನ್ನು ನೀಡುತ್ತಾನೆ. ದಾನದಲ್ಲಿರುವ ಸಾಮಾಜಿಕ, ಧಾರ್ಮಿಕ ಮೌಲ್ಯಗಳನ್ನು ಸಮಾಜದಲ್ಲಿ ದೀನರಿಗೆ, ದಲಿತರಿಗೆ, ಹಸಿವಿನಿಂದ ಬಳಲುವವರಿಗೆ ಕೈಯಿಂದಾದ ದಾನವನ್ನು ಮಾಡಬೇಕೆಂದು ಸಮಾಜದಲ್ಲಿ ಸಮಾನತೆ ತರಲು ಪ್ರಯತ್ನಿಸಿದಂತಿದೆ. ಜಾತಿ, ಭೇದ, ಮೇಲು, ಕೀಳೆಂಬ ಭಾವಗಳನ್ನು ಅಳಿಸಿ ಹಾಕಲು, ಸಮಾಜದ ಬವಣೆ ಸಂಕಟಗಳನ್ನು ದೂರ ಮಾಡಲು ದಾನ ಗುಣ ಪೂರಕವಾದೀತು. ಎಲ್ಲಕ್ಕೂ ದಾನವೇ ಲೇಸೆಂಬ ಮಾನವೀಯ ಅನುಕಂಪ ಹಾಗೂ ಮಾನವ ಪ್ರೇಮದ ಜೊತೆಗೆ ದಾನ ಧರ್ಮದ ಮೌಲ್ಯದ ರೀತಿ ನೀತಿಯನ್ನು ನಾವು ತಿಳಿದಿರಬೇಕಾಗುತ್ತದೆ. ದಾನ ಮಾಡುವುದರಿಂದ ಹಂಚಿ ಉಣ್ಣುವ ಸ್ವಭಾವ ಬೆಳೆದು, ಸಮಾಜದಲ್ಲಿ ಹಸಿವಿನಿಂದ ಸಾಯುವವರ ಸಂಖ್ಯೆ ಕಡಿಮೆಯಾದಿತೆಂಬ ಹಾಗೂ ಸಮಾಜದಲ್ಲಿ ಸಮಾನತೆ, ಪ್ರೀತಿಗೆ ದಾರಿಯಾಗುವ ಲೋಕದೃಷ್ಟಿಯ ವಿಚಾರ ದಾನದ ಮಹತ್ವದಿಂದ ಗೊತ್ತಾಗುತ್ತದೆ.

**ಆಧಾರ ಗ್ರಂಥಗಳು**

1. ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.
2. ಜಿ.ಎಸ್.ಶಿವರುದ್ರಪ್ಪ: ಸಮಗ್ರ ಗದ್ಯ.
3. ಬಿ.ಬಿ.ಹೆಂಡಿ: ಬಸವೇಶ್ವರ.
4. ರಾಜಶೇಖರ ಜಮದಂಡಿ: ಸರ್ವಜ್ಞನ ವಚನಗಳು ಒಂದು ಜಾನಪದೀಯ ಅಧ್ಯಯನ.

5. ವೀರಣ್ಣ ರಾಜೂರ: (ಸಂ) ಶಿವಶರಣೆಯರ ವಚನಗಳ ವಿಭಿನ್ನ ನೆಲೆಗಳು.
6. ಸಿ.ಪಿ.ಪ್ರಭುಸ್ವಾಮಿಮಠ: ಬಸವಣ್ಣನವರ ವಚನಗಳ ಸಾಹಿತ್ಯಿಕ ಅಧ್ಯಯನ.
7. ಎಂ.ಎಂ.ಕಲಬುರ್ಗಿ: ಜಂಗಮ ಬಸವ ಪಥ
8. ಎಸ್.ವಿ.ರಂಗಣ್ಣ: ಸರ್ವಜ್ಞ.
9. ರಂಜಾನ್ ದರ್ಗಾ: ಬಸವಧರ್ಮ ದರ್ಶನ.
10. ಎಂ.ಅಕಬರ ಅಲಿ: ಸರ್ವಜ್ಞನ ಸಮಾಜ ದರ್ಶನ ಮತ್ತು ಸಾಹಿತ್ಯ ತತ್ವ.
11. ಎಸ್.ಆರ್.ಪಾಟೀಲ: ಮಹಾಯೋಗಿ ವೇಮನ.